# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 5-8-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಸೋಯಾಬೀನ್ ಚಿಕಾಗೋ ದರ ಇಳಿಕೆ

ಅಮೇರಿಕಾದ ಸೋಯಾಬೀನ್ ಬೆಳೆ ಸದ್ಯ ಮಳೆಯಿಂದ ನಂತರ ಉತ್ತಮ ಸ್ಥಿತಿಯಲ್ಲಿದ್ದು, ಕ್ರೂಡ್ ಆಯಿಲ್ ದರ ಇಳಿಕೆಯಿಂದ ಹಾಗೂ ಇಂಡೋನೇಶಿಯಾ ರಫ್ತು ಹೆಚ್ಚಿಸಲು ಲೆವಿ ಮುಂತಾದ ತೆರಿಗೆಗಳಿಂದ ಮುಕ್ತ ಗೊಳಿಸುತ್ತಿರುವುದರಿಂದ ಸೋಯಾಬೀನ್ ಚಿಕಾಗೋ ಫ್ಯೂಚರ್ ದರ ಇಳಿಕೆಯಾಗಿದೆ. ಇದರಲ್ಲದೆ ಉಕ್ರೈನ್‌ನಿಂದ ರಫ್ತು ಪುನರಾರಂಭದ ಪ್ರಯತ್ನಗಳಿಂದ ಖಾದ್ಯತೈಲ ಜಾಗತಿಕ ಪೂರೈಕೆ ಹೆಚ್ಚಳಗೊಳ್ಳುವ ಸಾಧ್ಯತೆಯಿಂದ ಸೋಯಾಬೀನ್ ದರಗಳು ಮತ್ತು ಇಳಿಕೆಯಾಗುತ್ತಿದೆ.

## ಖಾದ್ಯತೈಲ ತಯಾರಕರಲ್ಲಿ ಮತ್ತೆ ದರ ಇಳಿಕೆಗೆ ಸರಕಾರದ ಕೇಳಿಕೆ

ಅಂತರಾಷ್ಟ್ರೀಯ ಖಾದ್ಯತೈಲ ದರ ಇಳಿಕೆಯ ಲಾಭ ಗ್ರಾಹಕರಿಗೆ ದೊರೆಯುವಾಗಲು ಮತ್ತೆ ಖಾದ್ಯತೈಲ ದರ ಇಳಿಕೆಗೆ ಸರಕಾರ ಮೂರನೇ ಬಾರಿ ತಯಾರಕರೊಂದಿಗೆ ಕೇಳಿಕೊಂಡಿದೆ. ಇಂಡೋನೇಶಿಯಾದ ಅನಿಶ್ಚಿತ ಪೂರೈಕೆ ಯ ಕೊರತೆ ನಿವಾರಿಸಲು ಮುಂದಿನ ಹೆಚ್ಚುವರಿ ಪಾಮೆಣ್ಣೆ ಪೂರೈಕೆಗೆ ಮಲೇಶಿಯಾ ಸಿದ್ಧವಿದೆಯೆಂದು ಹೇಳಿಕೊಂಡಿದೆ. ತೆಲಂಗಾಣದಲ್ಲಿ 2 ಮಿಲಿಯನ್ ಎಕರೆಗಳ ವಿಸ್ತೀರ್ಣದಲ್ಲಿ ಪಾಮ್ ಬೆಳೆಯಲು ಗುರಿಹೊಂದಲಾಗಿದೆಯೆನ್ನಲಾಗಿದೆ. (ಮುಂದಿನ ನಾಲ್ಕು ವರ್ಷಗಳಲ್ಲಿ). ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಹಿಂದಿನ ಜೂನ್‌ನಲ್ಲಿದ್ದ ಕನಿಷ್ಠ ದರದ ಹತ್ತಿರ ಸಮೀಪಿಸುತ್ತಿದೆಯೆನ್ನಲಾಗಿದೆ.

## ಚಿಕಾಗೋ ಜೋಳ ದರ ಇಳಿಕೆ

ಅಮೇರಿಕಾ ಪ್ರತಿಕೂಲ ಹವಾಮಾನ ಅನುಕೂಲಕರ ಪರಿಸ್ಥಿತಿಗೆ ಬರುತ್ತಿದ್ದು, ಸುಧಾರಣೆಯ ವರದಿಗಳಿಂದ ಉತ್ಪಾದನೆಯ ಕಳವಳ ನಿವಾರಣೆಯಾಗುತ್ತಿರುವುದರಿಂದ ಜೋಳ ದರಗಳು ಚಿಕಾಗೋ ಮಾರುಕಟ್ಟೆಯಲ್ಲಿ ಇಳಿಕೆಯಾಗುತ್ತಿದೆ. ಯುಕ್ರೈನ್‌ನಿಂದ ಸ್ಥಗಿತಗೊಂಡಿರುವ ರಫ್ತು ವ್ಯವಹಾರಗಳು ಮತ್ತೆ ಪುನರಾರಂಭವಾಗುವ ಸಾಧ್ಯತೆಗಳಿಂದ ಜಾಗತಿಕ ದರ ಇನ್ನೂ ಇಳಿಕೆಯಾಗುವ ಸಾಧ್ಯತೆಗಳಿವೆ. ಜಾಗತಿಕ ದರಕ್ಕೆ ಹೋಲಿಸಿದಾಗ ಭಾರತದ ಜೋಳ ದರ ಹೆಚ್ಚಳವಾಗಿದ್ದು ವ್ಯವಹಾರ ಆಕರ್ಷಕವಾಗಿಲ್ಲದಿರುವುದರಿಂದ ಭಾರತದಿಂದ ಜೋಳ ರಫ್ತು ಇಳಿಕೆಯಾಗಿದೆಯೆನ್ನಲಾಗಿದೆ.

## ಸಕ್ಕರೆ ರಫ್ತು 39 ಶೇಕಡಾ ಹೆಚ್ಚಳ

ಭಾರತದ 2021–22 ರಲ್ಲಿ ಸಕ್ಕರೆ ರಫ್ತು ಹಿಂದಿನ ವರ್ಷಕ್ಕಿಂತ 39 ಶೇಕಡಾ ಹೆಚ್ಚಳವಾಗಿ, 10.5 ಮಿಲಿಯನ್ ಟನ್‌ಗಳಾಗಿವೆ.

## ಅಕ್ಕಿ ರಫ್ತು 19 ಶೇಕಡಾ ಹೆಚ್ಚಳ

ಭಾರತದ ಅಕ್ಕಿ ರಫ್ತು(ಬಾಸ್ಮತಿ ಹಾಗೂ ಬಾಸ್ಮತಿಯೇತರ) 2021–22 ರಲ್ಲಿ 19ಶೇಕಡಾ ಹೆಚ್ಚಳವಾಗಿ 21–23 ಟನ್ ಗಳಾಗಿದೆ.

## ಜೋಳ ಬಿತ್ತನೆ ಪ್ರದೇಶ ಇಳಿಕೆ

ಬೇಳೆಕಾಳು ಒಟ್ಟು ಬಿತ್ತನೆ ಪ್ರದೇಶ ಹಿಂದಿನ ವರ್ಷದ 103.23 ಲಕ್ಷ ಹೆಕ್ಟೇರ್ ಗಳಿಂದ 106.18ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಳವಾಗಿದೆ. ಆದರೆ ತೊಗರಿ ಬಿತ್ತನೆ ಪ್ರದೇಶ ಹಿಂದಿನ ವರ್ಷದ 41.75ಲಕ್ಷ ಹೆಕ್ಟೇರ್‌ಗಳಿಂದ 36.11ಲಕ್ಷ ಹೆಕ್ಟೇರ್‌ಗಳಿಗೆ ಇಳಿಕೆಯಾಗಿದೆ. ಉದ್ದು ಹಿಂದಿನ ವರ್ಷದ 27.94 ಲಕ್ಷ ಹೆಕ್ಟೇರ್‌ಗಳಿಂದ 28.01 ಲಕ್ಷ ಹೆಕ್ಟೇರ್‌ಗಳಿಗೆ ಹಾಗೂ ಹೆಸರುಕಾಳು ಹಿಂದಿನ ವರ್ಷದ 25.29 ಲಕ್ಷ ಹೆಕ್ಟೇರ್‌ಗಳಿಂದ ಈ ವರ್ಷ 29.26 ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಳವಾಗಿದೆ. ಬೆಳೆಗಾರರು ಬೇಳೆಕಾಳು ಬೆಳೆಗಳಿಂದ ಲಾಭದಾಯಕ ವಾಣಿಜ್ಯ ಬೆಳೆಗಳಾದ ಹತ್ತಿ, ಸೋಯಾಬೀನ್ ಬೆಳೆಗಳತ್ತ ವಾಲುತ್ತಿದ್ದು ಬೇಳೆಕಾಳು ಬೆಳೆಯುವ ಬದಲಿಗೆ ವಾಣಿಜ್ಯ ಬೆಳೆ ಬೆಳೆಯುತ್ತಿದ್ದರೆನ್ನಲಾಗಿದೆ.